ದೂರಶಿಕ್ಷಣ ನಿರ್ದೇಶನಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ 583276, ಹೊಸಪೇಟೆ ತಾಲ್ಲೂಕು, ವಿಜಯನಗರ ಜಿಲ್ಲೆ

ಸಂಖ್ಯೆ:ಕವಿಹಂ:ದೂಶಿನಿ:17:ನಮೂನೆ:2022–23 ದಿನಾಂಕ:22.09.2022

# ಎಂ.ಎ. ಸಮಾಜಶಾಸ್ತ್ರ ಪ್ರಥಮ ವರ್ಷದ ಗೃಹಲೇಖನ ಪ್ರಶ್ನೆಪತ್ರಿಕೆ 2020–21

*ವಿದ್ಯಾರ್ಥಿಗಳ ಸೂಚನೆಗಳನ್ನು ಪ್ರತ್ಯೇಕವಾಗಿ ಹೊರಡಿಸಲಾಗಿದೆ. ಅದನ್ನು ಗಮನವಿಟ್ಟು ಓದಿಕೊಂಡು ಈ ಕೆಳಗಿನ ಪ್ರಶ್ನೆಗಳಿಗೆ ಗೃಹಲೇಖನ/ಸಂಪ್ರಬಂಧಗಳನ್ನು ಸಿದ್ಧಪಡಿಸಿ ಸಲ್ಲಿಸಲು ಸೂಚಿಸಿದೆ.*

ಗೃಹಲೇಖನ/ಸಂಪ್ರಬಂಧದ **ವಿಷಯಗಳು** (ಪ್ರತಿ ಪತ್ರಿಕೆಯಲ್ಲಿಯೂ ಎರಡು ವಿಷಯಗಳ ಕುರಿತು ಕಡ್ಡಾಯವಾಗಿ ಗೃಹಲೇಖನ/ಸಂಪ್ರಬಂಧ ಸಿದ್ಧಪಡಿಸಿ 2 ಸೆಟ್‌ಗಳಲ್ಲಿ ಸಲ್ಲಿಸಬೇಕು.)

## ಕೋರ್ಸ್–28ಎ(ಪತ್ರಿಕೆ) – 1 : ಆರಂಭಿಕ ಸಮಾಜಶಾಸ್ತ್ರದ ಚಿಂತನೆಗಳು

1. ಸಮಾಜಶಾಸ್ತ್ರೀಯ ಸಿದ್ಧಾಂತಗಳು ವೈಜ್ಞಾನಿಕ ಸಿದ್ಧಾಂತಗಳೇ? ವಿವರಿಸಿ.
2. ಪ್ರತ್ಯಕ್ಷ ಪ್ರಮಾಣವಾದದ ವೈಜ್ಞಾನಿಕ ದೃಷ್ಟಿಕೋನ ಹಾಗೂ ವಿಧಾನಗಳನ್ನು ವಿವರಿಸಿ.
3. ಹರ್ಬರ್ಟ್ ಸ್ಪೆನ್ಸರ ಸಮಾಜಶಾಸ್ತ್ರೀಯ ಸಿದ್ಧಾಂತ ಸಾಮಾಜಿಕ ವಿಕಾಸವನ್ನು ಅಧ್ಯಯನ ಮಾಡುವುದು ಎಂಬುದನ್ನು ವಿಶ್ಲೇಷಿಸಿ.
4. ಮಾರ್ಕ್ಸ್‌ರವರು ವರ್ಗ ಸಂಘರ್ಷ ಸಿದ್ಧಾಂತದ ಆಧಾರದ ಮೇಲೆ ಸಮಾಜದ ಬೆಳವಣಿಗೆಯನ್ನು ಐದು ಹಂತಗಳಾಗಿ ವಿಂಗಡಿಸಿರುವುದನ್ನು ಸಮಗ್ರವಾಗಿ ವಿವರಿಸಿ.
5. ನೌಕರಶಾಹಿ ಎಂದರೇನು? ಮತ್ತು ಅದರ ಗುಣಲಕ್ಷಣಗಳನ್ನು ವಿವರಿಸಿ.

## ಕೋರ್ಸ್–28ಬಿ(ಪತ್ರಿಕೆ) – 2 : ಸಾಮಾಜಿಕ ಸಂಶೋಧನಾ ವಿಧಾನ

1. ಇಪ್ಪತ್ತನೇ ಶತಮಾನವು ಸಮಾಜ ವಿಜ್ಞಾನಗಳ ಬೆಳವಣಿಗೆಯ ಮೇರು ಕಾಲವಾಗಿದೆ. ವಿವರಿಸಿ.
2. ಸಮಾಜಶಾಸ್ತ್ರ ಸಂಶೋಧನೆ ಮತ್ತು ಅರಿವಿನ ತರ್ಕಗಳ ನಡುವಿನ ಸಂಬಂಧಗಳನ್ನು ವಿವರಿಸಿ.
3. ಸಾಮಾಜಿಕ ಸಂಶೋಧನೆಯಲ್ಲಿ ವಿನ್ಯಾಸದ ಮಹತ್ವವನ್ನು ವಿವರಿಸಿ.
4. ಕುಲಶಾಸ್ತ್ರೀಯ ಅಧ್ಯಯನದ ಮಹತ್ವ ಕುರಿತು ಬರೆಯಿರಿ.
5. ಸಂಖ್ಯಾಶಾಸ್ತ್ರದ ಮಹತ್ವ ಮತ್ತು ಉಪಯೋಗಗಳನ್ನು ವಿಶ್ಲೇಷಣಾತ್ಮಕವಾಗಿ ಬರೆಯಿರಿ.

## ಕೋರ್ಸ್–28ಸಿ(ಪತ್ರಿಕೆ) – 3 : ಭಾರತೀಯ ಸಮಾಜ

1. ಭಾರತದ ಅಧ್ಯಯನ ದೃಷ್ಟಿಕೋನದ ಸ್ವರೂಪ ಮತ್ತು ಮಹತ್ವ ಕುರಿತು ಬರೆಯಿರಿ.
2. ಅವಿಭಕ್ತ ಕುಟುಂಬದ ಅರ್ಥ, ವ್ಯಾಖ್ಯೆ, ಲಕ್ಷಣ ಹಾಗೂ ಪ್ರಕಾರಗಳನ್ನು ವಿವರಿಸಿ.
3. ಜಮೀನ್ದಾರಿ ಪದ್ಧತಿಯ ಬಗ್ಗೆ ಸಮಗ್ರವಾಗಿ ವಿವರಿಸಿ.
4. ಕೃಷಿ ಉತ್ಪನ್ನ ಮಾರುಕಟ್ಟೆಯ ದೋಷ ಮತ್ತು ದೋಷಗಳ ನಿವಾರಣೆಗೆ ಸರ್ಕಾರ ಕೈಗೊಂಡ ಕ್ರಮಗಳನ್ನು ವಿವರಿಸಿ.
5. ಗ್ರಾಮೀಣ ಅಭಿವೃದ್ಧಿಯ ಸವಾಲುಗಳು, ಸರ್ಕಾರದ ಪಾತ್ರ ಹಾಗೂ ಸಮುದಾಯ ಭಾಗವಹಿಸುವಿಕೆಗಳ ಕುರಿತು ವಿಶ್ಲೇಷಿಸಿ.

## ಕೋರ್ಸ್–28ಡಿ(ಪತ್ರಿಕೆ) – 4 : ಅಲಕ್ಷಿತರ ಸಮಾಜಶಾಸ್ತ್ರ

1. ಭಾರತದ ಸಂದರ್ಭದಲ್ಲಿ ಅಲಕ್ಷಿತ ಗುಂಪುಗಳ ಪ್ರಕ್ರಿಯೆ ಮತ್ತು ಸ್ಥಾನಮಾನಗಳನ್ನು ವಿಶ್ಲೇಷಿಸಿ.
2. ಅಲಕ್ಷಿತ ಗುಂಪುಗಳಲ್ಲಿನ ಅಲೆಮಾರಿ ಮತ್ತು ಅರೆ ಅಲೆಮಾರಿ ಬುಡಕಟ್ಟು ಲೋಪವನ್ನು ವಿವರಿಸಿ.
3. ಸಂವಿಧಾನ ಹಿನ್ನೆಲೆಯಲ್ಲಿ ಅಸ್ಪೃಶ್ಯತೆ ನಿವಾರಣೆ ಹಾಗೂ ನಾಗರೀಕ ಹಕ್ಕುಗಳ ಕುರಿತು ವಿಶ್ಲೇಷಿಸಿ.
4. ಅಲಕ್ಷಿತರ ಗುಂಪುಗಳ ಅಭಿವೃದ್ಧಿಯಲ್ಲಿ ಜ್ಯೋತಿಬಾ ಫುಲೆ ಮತ್ತು ಪೆರೆಯರ್ ಅವರ ಪಾತ್ರವನ್ನು ವಿವರಿಸಿ.
5. ಕರ್ನಾಟಕದ ಪರಿಶಿಷ್ಟ ಜಾತಿ ಪಟ್ಟಿಯಲ್ಲಿರುವ ಸಮುದಾಯಗಳನ್ನು ಸಮಗ್ರವಾಗಿ ಪರಿಚಯಿಸಿ.

## ಕೋರ್ಸ್–28ಇ(ಪತ್ರಿಕೆ) – 5 : ಲಿಂಗವ್ಯವಸ್ಥೆ ಮತ್ತು ಸಮಾಜ

1. ಲಿಂಗ ವ್ಯವಸ್ಥೆಯ ನಿರ್ಧಾರಕಗಳಾವುವು/ಅಂಶಗಳಾವುವು ಎಂಬುದನ್ನು ಹೇಗೆ ಪತ್ತೆ ಹಚ್ಚುತ್ತೀರಿ? ಎಂಬುದನ್ನು ಕುರಿತು ಬರೆಯಿರಿ.
2. ಉದಾರವಾದಿ ಸ್ತ್ರೀವಾದಿ ಸಿದ್ಧಾಂತಗಳ ವಿವರಣೆಯನ್ನು ಅದರ ಲಕ್ಷಣಗಳೊಂದಿಗೆ ವಿವರಿಸಿ.
3. ಮತದಾನ ಹಕ್ಕಿನ ಚಳುವಳಿ ಎಂದರೇನು? ಅದರ ಸ್ವರೂಪವನ್ನು ಕುರಿತು ಸಮಗ್ರವಾಗಿ ಬರೆಯಿರಿ.
4. ಸಾಮಾಜಿಕ ರಚನೆ ಮತ್ತು ಲಿಂಗಾಧಾರಿತ ತಾರತಮ್ಯದ ವಿಶ್ಲೇಷಣೆ ಹಾಗೂ ಅದರ ಸ್ವರೂಪ ಕುರಿತು ಬರೆಯಿರಿ.
5. ಭಾರತದಲ್ಲಿ ಸ್ತ್ರೀಯರ ಸ್ಥಾನಮಾನದ ಮಾಪನಗಳ ಕುರಿತು ವಿವರಿಸಿ.

22/9/22
ನಿರ್ದೇಶಕರು
ದೂರಶಿಕ್ಷಣ ನಿರ್ದೇಶನಾಲಯ